ಮಹಾಭಾರತದ 'ಯಕ್ಷಪ್ರಶ್ನೆ'ಯ ಪ್ರಸಂಗದಲ್ಲಿ ಹೇಳುವಂತೆ, ಮನುಷ್ಯನು ಪ್ರತಿದಿನವೂ ಸಾವನ್ನು ನೋಡುತ್ತಾ ತಾನು ಸಾಯುವುದೇ ಇಲ್ಲವೆಂದು ತಿಳಿಯುವುದೇ ಪರಮಾಶ್ಚರ್ಯದ ಸಂಗತಿ.

ಗ್ರಾಸ್‌ಮನ್‌ರ ಈ ಕಾದಂಬರಿಯು 'ಸ್ಟ್ಯಾಂಡ್ ಅಪ್ ಕಾಮೆಡಿಯನ್' ಒಬ್ಬನು ನಿರಂತರವಾಗಿ ಎರಡು ಗಂಟೆಗಳ ಕಾಲ ಜೋಕುಗಳ ಮೂಲಕ ಪ್ರೇಕ್ಷಕರಿಗೆ ಮನರಂಜನೆ ನೀಡುತ್ತಾ, ಅವರೊಂದಿಗೆ ಸಂವಾದ ನಡೆಸುತ್ತಾ, ಅವರನ್ನು ತನ್ನ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತ, ತನ್ನ ಆ ಪ್ರಯತ್ನದಲ್ಲಿ ಅವರಿಗೆ ಬೇಸರ ತರಿಸುತ್ತಾ, ಅವರನ್ನು ಗೇಲಿ ಮಾಡುತ್ತಾ ಬೆಳೆಯುವುದರ ಕಥನ. ಇಂಥದೊಂದು 'ಪ್ರದರ್ಶನ ಕಲೆ'ಯು ಕಾದಂಬರಿಯಲ್ಲಿ ನಿರೂಪಿತವಾಗಿರುವ ರೂಪದಲ್ಲಿ ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಈಗ ಕರ್ನಾಟಕದ ಹಾಸ್ಯೋತ್ಸವಗಳಲ್ಲಿ ಕಾಣಿಸಿಕೊಳ್ಳುತ್ತಿರುವವರ 'ಪ್ರದರ್ಶನ'ಗಳಿಗಿಂತ ಕೊಂಚ ಭಿನ್ನವಾದ ಪ್ರಭೇಧ 'ಸ್ಟ್ಯಾಂಡ್ ಅಪ್ ಕಾಮೆಡಿ'ಗಳದು. ನಮ್ಮದೇ ಪರಂಪರೆಯಲ್ಲಿ ನೋಡಿದಾಗ, ಯಕ್ಷಗಾನವೂ ಸೇರಿದಂತೆ ಹಲವು ಬಗೆಯ ಜಾನಪದ ನಾಟಕಗಳಲ್ಲಿ ಬರುವ 'ಕೋಡಂಗಿ'ಯ ಪಾತ್ರವು ಇದಕ್ಕೆ ಹತ್ತಿರವಾದುದು. ಆದರೆ ಕೋಡಂಗಿ ಪ್ರದರ್ಶನದ ಮೊದಲಿನಲ್ಲಿ ಬರುವನೇ ಹೊರತು, ಅವನದು ಪೂರ್ಣಪ್ರಮಾಣದ 'ಶೋ' ಅಲ್ಲ. ಮ್ಯೂಸಿಕ್ ಹಾಲ್, ಕಾಮೆಡಿ ಶೋ ಮುಂತಾದ ಹಲವು ವೇದಿಕೆಗಳಲ್ಲಿ ಪ್ರದರ್ಶನಗೊಳ್ಳುವ 'ಕಾಮೆಡಿಯನ್'ನ ಪಾತ್ರವು ನಮ್ಮಲ್ಲಿನ ನಾಟಕದುದ್ದಕ್ಕೂ ಇರುವ ವಿದೂಷಕನಿಗಿಂತ ಭಿನ್ನ.

ದೊವಾಲೆ ಗ್ರೀನ್‌ಸ್ಟೈನ್ ಎಂಬ ಕಲಾವಿದನ ಬಾಲ್ಯ ಮತ್ತು ನಂತರದ ಬದುಕಿನ ಸುತ್ತ ಸುತ್ತುವ ಅವನ 'ಸ್ವಗತ–ಸಂಭಾಷಣೆ'ಯು ವಾಸ್ತವ, ಸುಳ್ಳು, ಕನಸು, ಸಮಾಜ ಎಲ್ಲವನ್ನು ಒಂದರೊಳಗೊಂದು ಅಳವಡಿಸಿಕೊಳ್ಳುತ್ತ ನಮ್ಮೆದುರು ಹೊಸ ಲೋಕಗಳನ್ನು ಅನಾವರಣಗೊಳಿಸುತ್ತದೆ. ಇದು ನಡೆಯುವುದು ಇಸ್ರೇಲ್‌ನ ನೆತಾನ್ಯ (ಇದರರ್ಥ 'ದೇವರ ಉಡುಗೊರೆ' ಎಂದು) ಎನ್ನುವ ಪುಟ್ಟ ಊರಿನ ಪುಟ್ಟ ಕ್ಲಬ್ ಒಂದರಲ್ಲಿ. ತನ್ನ ಬಾಲ್ಯದ ಗೆಳೆಯನೂ, ನಿವೃತ್ತ ನ್ಯಾಯಾಧೀಶನೂ ಆದ ಅವಶ್ಯೆ ಲಜಾರ್‌ನನ್ನು ದೊವಾಲೆಯು ತನ್ನ ಕಾಮಿಡಿ ಶೋಗೆ ಆಹ್ವಾನಿಸಿದ್ದಾನೆ. ಫೋನಿನಲ್ಲಿ ಮಾತನಾಡುವಾಗ ಅವನನ್ನು ಗುರುತು ಹಿಡಿಯಲು ಪ್ರಯಾಸ ಪಡುವ ಲಜಾರ್‌ಗೆ, ಫೋನ್ ಸಂಭಾಷಣೆಯು ಮುಗಿಯುವ ಹೊತ್ತಿಗೆ ಒಂದಷ್ಟು ಕಾಲ ತನ್ನ ಟ್ಯೂಷನ್ ಸಹಪಾಠಿಯಾಗಿದ್ದ, ತಮ್ಮಿಬ್ಬರ ಹದಿನಾಲ್ಕನೆಯ ವಯಸ್ಸಿನಲ್ಲಿ ಮಿಲಿಟರಿ ತರಬೇತಿಯ ಕ್ಯಾಂಪ್‌ನಲ್ಲಿದ್ದ ಮತ್ತು ಒಂದು ದಿನ ಇದ್ದಕ್ಕಿದ್ದಂತೆ ಅಲ್ಲಿಂದ ಹೊರಟುಹೋಗುವ ದೊವಾಲೆಯ ನೆನಪಾಗುತ್ತದೆ. ಶೋಗೆ ಹೋಗಲು ಮೊದಮೊದಲು ಹಿಂಜರಿಯುವ ಲಜಾರ್ ಕ್ರಮೇಣ, ತನ್ನ ಗೆಳೆಯನ ಪ್ರಾಮಾಣಿಕ ದನಿಯ ಕರೆಗೆ ಒಪ್ಪಿಕೊಂಡು ತಾನು ಏಕೆ ಬರಬೇಕೆಂದು ಕೇಳುತ್ತಾನೆ. ದೊವಾಲೆ ಹೇಳುತ್ತಾನೆ, 'ನೀನು ನನ್ನನ್ನು ನೋಡಬೇಕು, ನಿಜವಾಗಿ ನೋಡಬೇಕು, ಆಮೇಲೆ ನನಗೆ ಹೇಳಬೇಕು'.

ಲಜಾರ್, 'ಏನು ಹೇಳಬೇಕು?'

ಅದಕ್ಕೆ ದೊವಾಲೆ ಕೊಡುವ ಉತ್ತರ 'ನೀನೇನು ನೋಡುತ್ತೀಯೋ ಅದನ್ನು'.

ಲಜಾರ್ ಆ ಇಡೀ ಪ್ರದರ್ಶನವನ್ನು ನೋಡುತ್ತಾನೆ ಮತ್ತು ನೋಡಿದ್ದನ್ನು ಬರವಣಿಗೆಯಲ್ಲಿ ನಿರೂಪಿಸುವ ಮೂಲಕ ದಾಖಲಿಸುತ್ತಾನೆ. ದೊವಾಲೆ ಆಡುವ ಮಾತು, ಅವನ ಹಾವಭಾವ ಮತ್ತು ಅವನಿಗೆ ಪ್ರೇಕ್ಷಕರು ತೋರಿಸುವ ಪ್ರತಿಕ್ರಿಯೆಗಳು ಒಂದು ಕಡೆ ಲಜಾರ್‌ನ